CC No.:447/2013
P.W.:2

ಈ ದಿನ ದಿಃ10.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮದ್ಯಂತರ ಅರ್ಜಿ ಆದೇಶ ದಿನಾಂಕ04.10.2025ರ ಆಧಾರದ ಮೇಲೆ**

**ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಕೆಬಿಕೆ ರವರಿಂದಃ-**

1. ನಾನು ದಿನಾಂಕ.04.05.2012ರಂದು ಠಾಣೆಯಲ್ಲಿ ಎಸ್.ಆರ್ ಕರ್ತವ್ಯದಲ್ಲಿದ್ದೆ. ಎಸ್.ಆರ್ ಕರ್ತವ್ಯ ಎಂದರೆ ಸ್ಟೇಷನ್ ನಲ್ಲಿ ಇರುವುದು ಎಂದರ್ಥ. ಸಾಮಾನ್ಯವಾಹಿ ಸ್ಟೇಷನ್ ನಲ್ಲಿ ಕೆಲಸಕ್ಕೆ ಹಾಕಿದರೆ ಆ ಸಮಯದಲ್ಲಿ ಎಲ್ಲಿಗೂ ಹೋಗುವ ಆಗಿಲ್ಲ ಎಂದರೆ ಸಾಕ್ಷಿಯು ತುರ್ತು ಪರಿಸ್ಥಿತಿ ಬಂದಾಗ ಹೋಗಬೇಕಾಗುತ್ತದೆ ಎಂದು ನುಡಿಯುತ್ತಾರೆ. ಅಂತಹ ಸಮಯದಲ್ಲಿ ಬೇರೆಯವರನ್ನು ನಮ್ಮ ಕರ್ತವ್ಯಕ್ಕೆ ನೇಮಿಸಿ ನಮ್ಮನ್ನು ಕರೆಯಿಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಆ ದಿನ ನಾವು ಟಾಟಾಸುಮೊದಲ್ಲಿ ಹೋಗಿರುತ್ತೇವೆ. ಆ ವಾಹನದ ಸಂಖ್ಯೆ ನನಗೆ ಈಗ ನೆನಪಿಲ್ಲ. ಹಾರೋಹಳ್ಳಿ ಪೊಲೀಸ್ ಠಾಣೆಯಿಂದ ಮುರುಳಿದೊಡ್ಡಿ ಗ್ರಾಮಕ್ಕೆ 13-14 ಕೀ.ಮಿ ಅಂತರ ಇರಬಹುದು. ಆ ದಿನ ನಮ್ಮ ವಾಹನದಲ್ಲಿ ನಾನು, ಎಎಸ್ಐ ಸತ್ಯನಾರಾಯಣ್, ಮರಿಗೌಡ.ಹೆಚ್.ಸಿ, ಪಿಸಿ ಪ್ರಕಾಶ್ ಕುಮಾರ್ ರವರು ಹೋಗಿರುತ್ತೇವೆ. ಸತ್ಯನಾರಾಯಣ್ ರವರು ಆ ದಿನ ನನ್ನನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದರೆ ಸರಿ.

2. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ 5ನೇ ಆರೋಪಿಯು ವಿಷ ಕುಡಿದು ಬಿದ್ದಿದ್ದರು, 1ನೇ ಆರೋಪಿಯನ್ನು ನಮ್ಮ ಪೊಲೀಸ್ ಸಿಬ್ಬಂದಿಯವರಾದ ಮೋಹನ್ ರವರು ನಿಲ್ಲಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಿಬ್ಬಂದಿಯಾದ ಮೋಹನ್ ರವರನ್ನು ಅವರು ಮರಕ್ಕೆ ಕಟ್ಟಿ ಹಾಕಿದ್ದರು, ಜನರು ನಿಂತಿದ್ದರು, ನಂತರ 5ನೇ ಆರೋಪಿ ವಿಷ ಕುಡಿದಿದ್ದಾರೆಂಬ ವಿಷಯ ನಮಗೆ ತಿಳಿಸಿದರು ಎಂದು ನುಡಿಯುತ್ತಾರೆ. ಆ ದಿನ ಮೋಹನ್ ರವರನ್ನು ಕಟ್ಟಿ ಹಾಕಿದ ಮರ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮರವಲ್ಲ ಅದು ಕಂಬ ಎಂದು ನುಡಿಯುತ್ತಾರೆ. ಸದರಿ ಕಂಬ ಎಷ್ಟು ಉದ್ದವಿತ್ತು, ಎಷ್ಟು ದಪ್ಪವಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

3. ನಮ್ಮ ಸಿಬ್ಬಂದಿಯಾದ ಮೋಹನ್ ರವರು 5ನೇ ಆರೋಪಿಯ ನೈಟಿಯನ್ನು ಮತ್ತು ಕತ್ತಿನಪಟ್ಟಿಯನ್ನು ಹಿಡಿದು ಎಳೆದಾಡಿದ್ದಕ್ಕೆ ಆಕೆ ವಿಷ ಕುಡಿದಿದ್ದಳು ಎಂಬ ಸಂಗತಿ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಎದುರಿಗೆ ಆರೋಪಿತರು ಮೋಹನ್ ರವರಿಗೆ ಹೊಡೆದಿಲ್ಲ ಎಂದರೆ ಸರಿ. ನನ್ನ ಎದುರಿಗೆ ಆರೋಪಿತರು ಮೋಹನ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈಯಲಿಲ್ಲ ಎಂದರೆ ಸರಿ. ಈ ಎಲ್ಲಾ ಸಂಗತಿಗಳನ್ನು ಸತ್ಯನಾರಾಯಣ್ ರವರು ನನಗೆ ತಿಳಿಸಿದ ಮೇರೆಗೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ.

4. ಆ ದಿನ ಮೋಹನ್ ರವರು ಸಿವಿಲ್ ಡ್ರಸ್ ಹಾಕಿಕೊಂಡಿದ್ದರು ಎಂದರೆ ಸರಿ. 1ನೇ ಆರೋಪಿಯನ್ನು ದಸ್ತಗಿರಿ ಮಾಡಲು ಸದರಿ ಮೋಹನ್ ರವರಿಗೆ ಲಿಖಿತವಾಗಿ ಯಾವುದೇ ಆದೇಶ ನೀಡಿರಲಿಲ್ಲ ಎಂದರೆ ಸಾಕ್ಷಿಯು ನಮ್ಮ ಠಾಣೆಯ ಪಿಎಸ್ಐ ರವರು ಅವರಿಗೆ 1ನೇ ಆರೋಪಿಯನ್ನು ದಸ್ತಗಿರಿ ಮಾಡುವಂತೆ ಹೇಳಿದ್ದರು ಎಂದು ನುಡಿಯುತ್ತಾರೆ. ಆ ದಿನ ಮೋಹನ್ ರವರಿಗೆ ಯಾವ ಯಾವ ಕೆಲಸಗಳನ್ನು ನಿರ್ವಹಿಸುವಂತೆ ಹಾಕಲಾಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

5. ಮೋಹನ್ ರವರ ಕಾರಣದಿಂದಾಗಿಯೇ 5ನೇ ಆರೋಪಿಯು ಆ ದಿನ ವಿಷ ಕುಡಿದಿದ್ದರು ಮತ್ತು ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು ಎಂಬ ಸಂಗತಿ ನನಗೆ ಗೊತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 5ನೇ ಆರೋಪಿ ವಿಷ ಕುಡಿದ ಸಂಗತಿ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 5ನೇ ಆರೋಪಿಯು ವಿಷ ಕುಡಿಯಲು ಮೋಹನ್ ರವರೆ ಕಾರಣ ಎಂಬ ಸಂಗತಿಯು ನಮಗೆ ಗೊತ್ತಾದಾದ ನಂತರ ಹೇಗದಾರೂ ಮಾಡಿ ಮೋಹನ್ ರವರನ್ನು ಬಚಾವ್ ಮಾಡಬೇಕು ಎಂಬ ಉದ್ದೇಶದಿಂದ ಈ ಸುಳ್ಳು ಕೇಸನ್ನು ನಾವು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ನಾವು ಸ್ಥಳಕ್ಕೆ ಹೋಗಿಲ್ಲ, ಕಂಬಕ್ಕೆ ಮೋಹನ್ ರವರನ್ನು ಹಗ್ಗದಿಂದ ಕಟ್ಟಿದ್ದನ್ನು ನಾನು ನೋಡಿಲ್ಲ ಮತ್ತು ಅವರನ್ನು ಬಿಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಮೋಹನ್ ರವರು ನಮ್ಮ ಇಲಾಖೆಯವರಾದ ಕಾರಣಕ್ಕೆ ಅವರಿಗೆ ಹೇಗಾದರು

ಮಾಡಿ ಸಹಾಯ ಮಾಡಬೇಕೆಂದು ಈ ಕೇಸನ್ನು ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**